**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಿ.ಟಿ. ಶ್ರೀನಿವಾಸ (ಡಿ.ಟಿ.ಎಸ್) ಇವರ ಶೂನ್ಯ ವೇಳೆಯ ಪ್ರಶ್ನೆಗೆ ಸರ್ಕಾರದ ಉತ್ತರ**

**ವಿಷಯ:**

ಬೆಂಗಳೂರು ನಗರದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಿರುವ ಪಾದಚಾರಿ ಮೇಲ್ಸೇತುವೆಗಳು (ಸ್ಕೈವಾಕ್) ಸೂಕ್ತ ನಿರ್ವಹಣೆ ಇಲ್ಲದೆ ನಿಷ್ಪ್ರಯೋಜಕವಾಗಿದೆ. ಲಿಫ್ಟ್ ಸ್ವಚ್ಛತೆ ಸೇರಿದಂತೆ ಮೂಲಸೌಕರ್ಯ ಸಮಸ್ಯೆಯಿಂದಾಗಿ ಪಾದಚಾರಿಗಳು ಸ್ಕೈವಾಕ್‌ಗಳ ಬದಲಿಗೆ ವಾಹನ ದಟ್ಟಣೆಯತ್ತ ರಸ್ತೆಗಳನ್ನು ದಾಟುತ್ತಿದ್ದು, ನಿತ್ಯವೂ ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಿದೆ. ಹೆಚ್ಚು ವಾಹನ ದಟ್ಟಣೆಯ ಹಾಗೂ ಪಾದಚಾರಿಗಳ ಓಡಾಟ ಹೆಚ್ಚಿರುವ 45 ಸ್ಥಳಗಳಲ್ಲಿ ವಾಕ್‌ಗಳನ್ನು ನಿರ್ಮಿಸಲಾಗಿದೆ. ಇನ್ನೂ 10 ಕಡೆಗಳಲ್ಲಿ ಹೊಸ ಸ್ಕೈವಾಕ್‌ಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಆಸ್ಪತ್ರೆಗಳು, ಸರಕಾರಿ ಕಛೇರಿಗಳು, ಮಾರುಕಟ್ಟೆಗಳು, ಬಸ್ ನಿಲ್ದಾಣಗಳೂ ಸೇರಿದಂತೆ ಜನರ ಓಡಾಟ ಹಾಗೂ ವಾಹನಗಳ ಸಂಚಾರ ಹೆಚ್ಚಿರುವ ಕಡೆ ಪಾಲಿಕೆಯೂ ಸ್ಕೈವಾಕ್‌ಗಳನ್ನು ನಿರ್ಮಿಸಿ ಕೈ ತೊಳೆದುಕೊಂಡಿದೆ.

ಕೇವಲ ಸ್ಕೈವಾಕ್‌ಗಳ ನಿರ್ವಹಣೆಯ ಹೊಣೆ ಹೊತ್ತಿರುವ ಖಾಸಗಿ ಏಜೆನ್ಸಿಗಳು ಜವಾಬ್ದಾರಿ ಮರೆತಿದ್ದು, ವಾಕ್‌ಗಳಲ್ಲಿ ಮೂಲಸೌಕರ್ಯಗಳು–ಮರೀಚಿಕೆಯಾಗಿವೆ. ಜಾಹೀರಾತು ಪ್ರದರ್ಶನಕ್ಕೆ ಸೀಮಿತವಾಗಿರುವ ಸ್ಕೈವಾಕ್‌ಗಳಿಂದ ಹಣ ಮಾಡಿಕೊಳ್ಳುತ್ತಿರುವ ಖಾಸಗಿ ಏಜೆನ್ಸಿಗಳು, ಕೆಂಗೇರಿ, ಬಸ್ ಟರ್ಮಿನಲ್ ಮುಂಭಾಗದಲ್ಲಿರುವ ನಿರ್ವಹಣೆಯನ್ನು ಮರೆತು ವರ್ಷಗಳೇ ಕಳೆದಿದೆ. ಸ್ಕೈವಾಕ್ ಸಾರ್ವಜನಿಕ ಸೇವೆಗೆ ಮುಕ್ತವಾಗಿ ವರ್ಷವೇ ಕಳೆದರೂ ಇಲ್ಲಿ ಲಿಫ್ಟ್ ಸೌಕರ್ಯ ಇನ್ನೂ ಆರಂಭವಾಗಿಲ್ಲ. ಸ್ಕೈವಾಕ್‌ಗಳ ಸಮಸ್ಯೆಯಿಂದಾಗಿ ಹಿರಿಯನಾಗರಿಕರು, ವೃದ್ಧರು, ಮಹಿಳೆಯರು ಹಾಗೂ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಈ ಕೂಡಲೇ ಬಿ.ಬಿ.ಎಂ.ಪಿ ಅಧಿಕಾರಿಗಳು ಸ್ಕೈವಾಕ್‌ಗಳ ನಿರ್ವಹಣೆ ಮೇಲೆ ನಿರಂತರ ನಿಗಾವಹಿಸಿ, ಕೆಟ್ಟು ಮೂಲೆ ಸೇರಿರುವ ಲಿಫ್ಟ್‌ಗಳನ್ನು ಶೀಘ್ರವಾಗಿ ದುರಸ್ತಿಪಡಿಸಿ, ಈ ವಿಷಯವನ್ನು ಸಾರ್ವಜನಿಕರ ಉಪಯೋಗಕ್ಕೆ ಅನುಕೂಲ ಮಾಡಿಕೊಡುವಂತೆ ಕೋರಿರುವ ಕುರಿತು.

**ಉತ್ತರ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರು ಸುರಕ್ಷಿತವಾಗಿ ರಸ್ತೆ ದಾಟಲು ಅನುವಾಗುವಂತೆ ಪಿ.ಪಿ.ಪಿ ಮಾದರಿಯಲ್ಲಿ ಮತ್ತು ಸರ್ಕಾರದ ಅನುದಾನದಡಿಯಲ್ಲಿ ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್) ಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ಸದರಿ ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್) ಗಳನ್ನು ಲಿಫ್ಟ್ / ಎಸ್ಕಲೇಟರ್ ಸಹಿತವಾಗಿ ನಿರ್ಮಾಣ ಮಾಡಲಾಗುತ್ತಿದ್ದು, ಸದರಿ ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್) ಗಳ ಕಾಮಗಾರಿಗಳು ಪೂರ್ಣಗೊಂಡ ನಂತರ ಲಿಫ್ಟ್ / ಎಸ್ಕಲೇಟರ್ ಗಳಿಗೆ ಸಂಬಂಧಪಟ್ಟ ಬೆಸ್ಕಾಂ ಮತ್ತು Electrical Inspectorate ರವರಿಂದ ಅಗತ್ಯ ಅನುಮತಿ ಪಡೆದು ಸಾರ್ವಜನಿಕರ ಉಪಯೋಗಕ್ಕೆ ಅನುವು ಮಾಡಿಕೊಡಲಾಗಿರುತ್ತದೆ.

ಮುಂದುವರೆದು ಪಿ.ಪಿ.ಪಿ ಮಾದರಿಯಲ್ಲಿ ನಿರ್ಮಿಸಲಾಗಿರುವ ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್) ಗಳನ್ನು ನಿರ್ಮಾಣ ಮಾಡಿದ ಏಜೆನ್ಸಿಗಳು ನಿರ್ವಹಣೆ ಕಾರ್ಯಗಳಾದ ಸ್ವಚ್ಛತೆ, ಭದ್ರತೆ, ಲಿಫ್ಟ್ / ಎಸ್ಕಲೇಟರ್‌ಗಳ ನಿರ್ವಹಣೆ ಹಾಗೂ ಇತ್ಯಾದಿ ನಿರ್ವಹಣೆ ಕಾರ್ಯಗಳನ್ನು ಕೈಗೊಳ್ಳುತ್ತಿರುತ್ತಾರೆ.

. . .2/-

ಸರ್ಕಾರದ ಅನುದಾನದಡಿಯಲ್ಲಿ ಪಾಲಿಕೆ ವತಿಯಿಂದ (ಜಾಹೀರಾತು ಹಕ್ಕುಗಳ ಅಡಿಯಲ್ಲಿ ಒಳಪಡದ) ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್) ಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಈ ಪೈಕಿ 03 ಸ್ಥಳಗಳಲ್ಲಿ ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್) ಗಳನ್ನು ಪಾಲಿಕೆ ವತಿಯಿಂದ ನಿರ್ಮಿಸಿ, ನಿರ್ವಹಣೆ ಕಾರ್ಯ ಕೈಗೊಳ್ಳಲಾಗುತ್ತಿರುತ್ತದೆ. ಉಳಿದಂತೆ 12 ಸ್ಥಳಗಳಲ್ಲಿ ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್) ಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಸದರಿ ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್) ಗಳ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಲಿಫ್ಟ್ ಕಾರ್ಯನಿರ್ವಹಣೆ ಮತ್ತು ವಿದ್ಯುತ್ ಸಂಪರ್ಕಕ್ಕಾಗಿ ಸಂಬಂಧಪಟ್ಟ ಬೆಸ್ಕಾಂ ಮತ್ತು Electrical Inspectorate ರವರಿಂದ ಅಗತ್ಯ ಅನುಮತಿ ನಿರೀಕ್ಷಿಸಲಾಗಿದ್ದು, ತದನಂತರ ಸಾರ್ವಜನಿಕರ ಉಪಯೋಗಕ್ಕೆ ಅನುವು ಮಾಡಿಕೊಡಲಾಗುತ್ತದೆ.

ಮೇಲ್ಕಂಡ 12 ಸ್ಥಳಗಳ ಪೈಕಿ ಕೆಂಗೇರಿ ಬಸ್ ಟರ್ಮಿನಲ್ ಮುಂಭಾಗದಲ್ಲಿರುವ ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್) ಯ ಸಿವಿಲ್ ಕಾಮಗಾರಿಗಳು, ಲಿಫ್ಟ್ ಅಳವಡಿಕೆ ಹಾಗೂ ವಿದ್ಯುತ್ ಸಂಪರ್ಕ ಕಾಮಗಾರಿಗಳು ಸಂಪೂರ್ಣಗೊಂಡಿದ್ದು, ಲಿಫ್ಟ್ ಅನ್ನು ಪ್ರಾಯೋಗಿಕ ಚಾಲನೆ ಪರೀಕ್ಷೆಗೆ ಒಳಪಡಿಸಲಾಗಿದ್ದು, ಪ್ರಸ್ತುತ Electrical Inspectorate ರವರಿಂದ ಅನುಮತಿ ನಿರೀಕ್ಷಿಸಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಮತಿ ಬಂದ ನಂತರ ಲಿಫ್ಟ್ ಅನ್ನು ಸಾರ್ವಜನಿಕರ ಉಪಯೋಗಕ್ಕೆ ಅನುವುಮಾಡಿಕೊಡಲಾಗುತ್ತದೆ.

**ಸಂಖ್ಯೆ: ನಅಇ 165 ಎಂಎನ್‌ವೈ 2025 (ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ